**ತಾಲ್ಲೂಕು ಕಾನೂನು ಸೇವೆಗಳ ಸಮಿತಿ,**
**ನ್ಯಾಯಾಲಯದ ಸಂಕೀರ್ಣ,**
**ಆನೇಕಲ್.**

<u>ಮಾಹಿತಿ ಹಕ್ಕು ಅಧಿನಿಯಮ, **2005** ರ ಪ್ರಕರಣ **4** ರಡಿಯಲ್ಲಿ ಮಾಹಿತಿ ವಿವರ</u>

| | |
|---|---|
| ಕಛೇರಿ ಹೆಸರು ಮತ್ತು ವಿಳಾಸ | ತಾಲ್ಲೂಕು ಕಾನೂನು ಸೇವೆಗಳ ಸಮಿತಿ . ನ್ಯಾಯಾಲಯದ ಸಂಕೀರ್ಣ ಆನೇಕಲ್ |
| ಕಛೇರಿ ದೂರವಾಣಿ ಸಂಖ್ಯೆ | 9591615228 |
| ಕಛೇರಿ ಇ-ಮೇಲ್ ವಿವರ | tlscanekal@gmail.com<br>shobatmc@gmail.com |
| ವೆಬ್ ಸೈಟ್ | https://bengalururural.dcourts.gov.in/ |

ತಾಲ್ಲೂಕು ಕಾನೂನು ಸೇವೆಗಳ ಸಮಿತಿಯ ಧ್ಯೇಯೋದ್ದೇಶಗಳು:

- ಸಾರ್ವಜನಿಕರಲ್ಲಿ ಕಾನೂನಿನ ಬಗ್ಗೆ ಅರಿವನ್ನು ಉಂಟು ಮಾಡುವುದು. (ಅರಿವು-ನೆರವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ
- ಉಚಿತ ಕಾನೂನು ನೆರವು ಮತ್ತು ಸಲಹೆಯನ್ನು ನೀಡುವುದು.
- ಜನತಾ ನ್ಯಾಯಾಲಯ (ಲೋಕ್ ಆದಾಲತ್) ಗಳ ಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಜನರಿಗೆ ತ್ವರಿತವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನ್ಯಾಯ ದೊರಕಿಸಿಕೊಡುವುದು.

ತಾಲ್ಲೂಕು ಕಾನೂನು ಸೇವೆಗಳ ಸಮಿತಿಯಿಂದ ಉಚಿತವಾಗಿ ದೊರಕುವ ಸೇವೆಗಳು :

- ಉಚಿತ ಕಾನೂನು ಸೇವೆಗಳು (ನಿಶ್ಚಿತ ವರ್ಗಗಳವರಿಗೆ) ಹಾಗೂ ವಾರ್ಷಿಕ ಆದಾಯ ರೂ.3.00 ಲಕ್ಷಗಳಿಗಿಂತ ಕಡಿಮೆ ಹೊಂದಿರುವವರಿಗೆ
- ಉಚಿತ ಕಾನೂನು ಸಲಹೆ
- ರಾಜೀ ಸಂಧಾನ
- ಜನತಾ ನ್ಯಾಯಾಲಯ ಮೂಲಕ ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ಇತ್ಯರ್ಥ
- ಮಧ್ಯಸ್ಥಿಕೆ ಕೇಂದ್ರಗಳ ಮೂಲಕ ಸಂಧಾನ ವ್ಯವಸ್ಥೆ.
- ವ್ಯಾಜ್ಯಪೂರ್ವ ಸಮಸ್ಯೆಗಳ ಪರಿಹಾರ
- ಕಾನೂನು ಸಾಕ್ಷರತೆ/ ಕಾನೂನು ಅರಿವು-ನೆರವು

ಉಚಿತ ಕಾನೂನು ಸಲಹೆ ಮತ್ತು ಸೇವೆ/ ನೆರವನ್ನು ಪಡೆಯಲು ಅರ್ಹರು :

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು ;
- ಮಹಿಳೆಯರು ಮತ್ತು ಮಕ್ಕಳು,
- ಕಾರ್ಖಾನೆಯ ಕಾರ್ಮಿಕರು.
- ಗುಂಪು ಘರ್ಷಣೆ, ಗಲಭೆ, ಪ್ರವಾಹ, ಕ್ಷಾಮ, ಭೂಕಂಪ, ಕೈಗಾರಿಕಾ ವಿನಾಶಾ ಮುಂತಾದವುಗಳಿಗೆ ತುತ್ತಾದವರು;
- ಮತೀಯ ಗಲಭೆಯ ಕಾರಣದಿಂದ ದೌರ್ಜನ್ಯಕ್ಕೆ ಹೊಂದಿದವರು;
- ರಕ್ಷಣಾ ಗೃಹ, ಮನೋರೋಗಿಗಳ ಆಸ್ಪತ್ರೆ ಮುಂತಾದವುಗಳಲ್ಲಿ ಅಭಿರಕ್ಷೆಯಲ್ಲಿರುವವರು;
- ದೈಹಿಕ ವ್ಯಾಪಾರ ಅಥವಾ ಜೀತಕ್ಕೊಳಗಾದವರು ಮತ್ತು
- ವಾರ್ಷಿಕ ಆದಾಯ ಮೂರು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜನರು ಉಚಿತ ಕಾನೂನು ಸೇವೆಯನ್ನು ಪಡೆಯಲು ಅರ್ಹರಿರುತ್ತಾರೆ.
- ಸರ್ವೋಚ್ಛ ನ್ಯಾಯಾಲಯದಲ್ಲಿ ಕಾನೂನು ಸೇವೆಯನ್ನು ಪಡೆಯಲು ವಾರ್ಷಿಕ ಆದಾಯ ಐದು ಲಕ್ಷಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜನರು ಉಚಿತ ಕಾನೂನು ಸೇವೆಯನ್ನು ಪಡೆಯಲು ಅರ್ಹರಿರುತ್ತಾರೆ.
- ಉಚಿತ ಕಾನೂನು ನೆರವು ಎಂದರೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ವಕೀಲರ ಫೀಸು ಮತ್ತು

ನ್ಯಾಯಾಲಯ ಶುಲ್ಕ ಹಾಗೂ ಇತರೆ ವೆಚ್ಚಗಳನ್ನು ಸಂಪೂರ್ಣವಾಗಿ ಜಿಲ್ಲಾ ಪ್ರಾಧಿಕಾರದಿಂದಲೇ ಭರಿಸಲಾಗುವುದು.

- ವಿಚಾರಣಾಧೀನ ಖೈದಿಗಳಿಗೆ ಉಚಿತ ಕಾನೂನು ಸೇವೆಗಳನ್ನು ನೀಡಲಾಗುವುದು.

ಉಚಿತ ಕಾನೂನು ಸಲಹಾ ಕೇಂದ್ರಗಳು:

ಸಾರ್ವಜನಿಕರಿಗಾಗಿ ತಾಲ್ಲೂಕು ಕಾನೂನು ಸೇವಾ ಸಮಿತಿ ಈ ಕೆಳಕಂಡ ಸ್ಥಳಗಳಲ್ಲಿ ಉಚಿತ ಕಾನೂನು ಸಲಹಾ ಕೇಂದ್ರ ಸೇವೆಯನ್ನು ಪ್ರಾರಂಭಿಸಲಾಗಿದ್ದು, ಈ ಕೇಂದ್ರಗಳ ಮೂಲಕ ಸಾರ್ವಜನಿಕರು ದಿನನಿತ್ಯದ ಕಾನೂನು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಉಚಿತ ಕಾನೂನು ಸಲಹಾ ಕೇಂದ್ರಗಳ ವಿವರ:-

ಕೋರ್ಟ ಕಾಂಪ್ಲೆಕ್ಸ್ ಆನೇಕಲ್
ಸಿಡಿಪಿಓ ಕಛೇರಿ ಆನೇಕಲ್
ತಹಸಿಲ್ದಾರ ರವರ ಕಛೇರಿ ಆನೇಕಲ್
ಸ್ವಾಧಾರ ಗೃಹ ಆನೇಕಲ್

ಜನತಾ ನ್ಯಾಯಾಲಯ (ಲೋಕ್ ಅದಾಲತ್)ಗಳು :

ಪ್ರಕರಣವೊಂದರ ಉಭಯ ಪಕ್ಷಗಳವರಲ್ಲಿ ರಾಜೀ ಸಂದಾನ ಏರ್ಪಡಿಸುವ ಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ನ್ಯಾಯಾಲಯವೇ ಜನತಾ ನ್ಯಾಯಾಲಯ: (ಲೋಕ್ ಅದಾಲತ್)"

ಜನತಾ ನ್ಯಾಯಾಲಯಗಳಲ್ಲಿ ಎಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ?

ಜನತಾ ನ್ಯಾಯಾಲಯಗಳಲ್ಲಿ ಎಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ?

ಜನತಾ ನ್ಯಾಯಾಲಯಗಳ ವೈಶಿಷ್ಟ್ಯ:

- ವ್ಯಾಜ್ಯವನ್ನು ಜನತಾ ನ್ಯಾಯಾಲಯದ (ಲೋಕ್ ಅದಾಲತ್‌ನ) ಮೂಲಕ ಶೀಘ್ರವಾಗಿ ಇತ್ಯರ್ಥಗೊಳಿಸಿಕೊಳ್ಳಬಹುದು.
- ಇಲ್ಲಿ ಯಾವುದೇ ಕೋರ್ಟ್ ಫೀ (ನ್ಯಾಯಾಲಯ ಶುಲ್ಕ) ಪಾವತಿಸುವಂತಿರುವುದಿಲ್ಲ.
- ಜನತಾ ನ್ಯಾಯಾಲಯದಲ್ಲಿ ನೀವು ವಕೀಲರ ಮುಖಾಂತರವೇ ಭಾಗವಹಿಸಬೇಕೆನ್ನುವ ನಿಯಮವೇನೂ ಇಲ್ಲ. ನೀವೇ ನೇರವಾಗಿ ಭಾಗವಹಿಸಬಹುದು.

- ನಿಮ್ಮ ಪ್ರಕರಣದಲ್ಲಿ ನಿಮಗೆ ಮಾರ್ಗದರ್ಶನ ನೀಡಿ ರಾಜೀ ಸಂಧಾನ ಏರ್ಪಡಿಸಲು ಜನತಾ ನ್ಯಾಯಾಲಯದಲ್ಲಿ ಕನಿಷ್ಠ ಇಬ್ಬರು ಸಂಧಾನಕಾರರಿದ್ದು ಅವರಲ್ಲಿ ಒಬ್ಬರು ನ್ಯಾಯಾಧೀಶರೇ ಸಂಧಾನಕಾರರು ಸೂಚಿಸುವ ಪರಿಹಾರ ನಿಮಗೆ ತೃಪ್ತಿಯಾದಲ್ಲಿ ಮಾತ್ರ ನೀವು ಮಾಡಿಕೊಳ್ಳಬಹುದು

ಮಧ್ಯಸ್ಥಿಕೆ ಕೇಂದ್ರ :

- ಮಧ್ಯಸ್ಥಿಕೆಯು ವಿವಾದ ಹೊಂದಿರುವ ಪಕ್ಷಕಾರರು ವಿಚಾರಣೆ ಹೋಗದೆ ತಮ್ಮ ವಿವಾದವನ್ನು ಸೃಜನಾತ್ಮಕವಾಗಿ ಇತ್ಯರ್ಥಪಡಿಸಿಕೊಳ್ಳಲು ಸಹಾಯ ಮಾಡುವ ಒಂದು ಪ್ರಕ್ರಿಯೆಯಾಗಿದೆ ವಿವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆಯ ಎಲ್ಲಾ ಪಕ್ಷಕಾರರು ಹಾಗೂ ಅವರ ವಕೀಲರು ಸಕ್ರೀಯವಾಗಿ ಪಾಲ್ಗೊಳ್ಳುವಂತಹ ಒಂದು ವಿಶಿಷ್ಟ ಅವಕಾಶವನ್ನು ಇದು ಕಲ್ಪಿಸುತ್ತದೆ. ಮಧ್ಯಸ್ಥಿಕೆಯಲ್ಲಿ ನಿರ್ದಾರ ಕೈಗೊಳ್ಳುವ ಅಧಿಕಾರವು ಯಾವಾಗಲೂ ಪಕ್ಷಕಾರರದ್ದೇ ಆಗಿರುತ್ತದೆ. ಮಧ್ಯಸಥಗಾರರು ವಿವಾದವೆತ್ತಿರುವ ಪಕ್ಷಕಾರರನ್ನು ವಿವಾದಕ್ಕೊಳಗಾಗಿರುವ ವಿಷಯವನ್ನು ಅರ್ಥ ಮಾಡಿಕೊಂಡು ಇತ್ಯರ್ಥಕ್ಕೆ ಬರಲು ಇರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಪ್ರಯತ್ನ ಮಾಡುತ್ತಾನೆ.

- ಮಧ್ಯಸ್ಥಿಕೆಯು ಸ್ವಪ್ರೇರಿತವಾದದ್ದಾಗಿರುತ್ತದೆ. ಮಧ್ಯಸ್ಥಿಕೆಯು ಯಾವಾಗಲೂ ಪಾರದರ್ಶಕವಾಗಿರುತ್ತದೆ. ಮಧ್ಯಸ್ಥಿಕೆಯಲ್ಲಿ ಹಣ ಮತ್ತು ಸಮಯ ವ್ಯರ್ಥವಾಗುವುದಿಲ್ಲ. ಮಧ್ಯಸ್ಥಿಕೆಯಲ್ಲಿ ನಿಯಮ ಹಾಗೂ ಸಾಕ್ಷ್ಯಕ್ಕೆ

ಬದಲಾಗಿ ಪಕ್ಷಕಾರರ ಹಿತಾಸಕ್ತಿಗಳ ಬಗೆಗೆ ಗಮನ ಹರಿಸಲಾಗುವುದು. ಮಧ್ಯಸ್ಥಿಕೆಯು ಪಕ್ಷಕಾರರು ತಾವೇ ವಿವಾದವನ್ನು ಇತ್ಯರ್ಥಗೊಳಿಸಿಕೊಳ್ಳಲು ಶಕ್ತರಾಗುವಂತೆ ಮಾಡುತ್ತದೆ. ಪ್ರಕರಣದ ಇತ್ಯರ್ಥ ಸಾಧ್ಯವಾಗದಿದ್ದಲ್ಲಿ ನ್ಯಾಯ ನಿರ್ಣಯಕ್ಕಾಗಿ ಅದನ್ನು ಮಧ್ಯಸ್ಥಿಕೆಗಾಗಿ ಕಳುಹಿಸಿದ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಲಾಗುವುದು. ಪ್ರತಿ ಜಿಲ್ಲೆಯಲ್ಲಿ ಮಧ್ಯಸ್ಥಿಕೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಾಲಯವನ್ನು ಸಂಪರ್ಕಿಸಬಹುದು.

ರಾಜೀ ಸಂಧಾನ / ವ್ಯಾಜ್ಯ ಪೂರ್ವ ಪ್ರಕರಣ :

ಸಾರ್ವಜನಿಕರು ದಿನ ನಿತ್ಯದ ಕಾನೂನು ಹಾಗೂ ಇತರೆ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಕಾರ್ಯಾಲಯಗಳಿಗೆಭೇಟಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ಸಮಸ್ಯೆಗಳನ್ನು ಪರಿಹರಿಸುವ ವ್ಯವಸ್ಥೆ ಮಾಡಲಾಗುವುದು.

(ಸ್ವಪ್ರೇರಿತ ಕಾನೂನು ಸಹಾಯಕರು PLV ):

ಕಾನೂನು ಸಹಯಕರಾಗಿ ತರಬೇತಿ ಪಡೆದವರು ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಅರ್ಹ ನಾಗರೀಕರ ನಡುವೆ ಪರಿಣಾಮಕಾರಿ ಸಮನ್ವಯಕಾರರಾಗಿ ಕಾರ್ಯನಿರ್ವಹಿಸುತ್ತಾರೆ.
ಸ್ವಪ್ರೇರಿತ ಕಾನೂನು ಸಹಾಯಕರು ತಮ್ಮ ಸುತ್ತಮುತ್ತಲಿನ ಪ್ರದೇಶದ ಶೋಷಿತ ಹಾಗೂ ದೌರ್ಜನ್ಯಕ್ಕೊಳಗಾದ ಜನರ ಸೇವೆ ಮಾಡಲು ಅರ್ಪಣಾ ಮನೋಭಾವ ಹೊಂದಿರುತ್ತಾರೆ. ಇವರು ಸರ್ಕಾರದ ವಿವಿಧ ಯೋಜನೆಗಳು, ಆದೇಶಗಳು, ಶಾಸನಗಳು, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ, ಜನತಾ ನ್ಯಾಯಾಲಯಗಳು, ಪರ್ಯಾಯ ವಿವಾದ ಪರಿಹಾರ ವ್ಯವಸ್ಥೆ, ಉಚಿತ ಕಾನೂನು ಸಹಾಯ ಮತ್ತು ಸೇವೆಗಳ ಬಗೆಗೆ ಅರಿವನ್ನುಂಟು ಮಾಡುವ ಸೇವೆಯನ್ನು ಸಲ್ಲಿಸುವುದಲ್ಲದೇ ನಾಗರೀಕರ ಹಕ್ಕುಗಳು ಹಾಗೂ ಹೊಣೆಗಳ ಬಗೆಗೆ ಶಿಕ್ಷಣ ನೀಡುವುದು, ಸಮಸ್ಯೆಗಳಿಗೆ ಪರಿಹಾರ/ ಸಲಹೆ ಕೋರಿ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸುವ ಬಗೆಗೆ ಜನರಲ್ಲಿ ಅರಿವು ಮೂಡಿಸುವುದು, ಕಾನೂನು ಅರಿವು ಶಿಬಿರಗಳನ್ನು ಬೇರೆಯವರ ಸಹಯೋಗದೊಂದಿಗೆ ವ್ಯವಸ್ಥೆಗೊಳಿಸುವುದು, ಕಾನೂನು ಸೇವೆಗಳ ಪ್ರಾಧಿಕಾರ/ ಕಾನೂನು ಸೇವೆಗಳ ಸಮಿತಿಗಳು ಒದಗಿಸುವ ಸೇವೆಗಳ ಬಗೆಗೆ ಅರಿವನ್ನುಂಟುಮಾಡುವುದು, ಮಧ್ಯಸ್ಥಿಕೆ, ರಾಜಿ ಸಂಧಾನ ಮತ್ತು ಜನತಾ ನ್ಯಾಯಾಲಯಗಳ ಮೂಲಕ ವಿವಾದಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ಇರುವ ಪ್ರಯೋಜನದ ಬಗೆಗೆ ನಾಗರೀಕರಿಗೆ ತಿಳುವಳಿಕೆ ನೀಡುವುದು, ಇವೇ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸ್ವಪ್ರೇರಿತ ಕಾನೂನು ಸಹಾಯಕರು ಸಮಾಜದಲ್ಲಿ ಎಲ್ಲರಿಗೂ ನ್ಯಾಯಾಕ್ಕೆ ಪ್ರವೇಶಾವಕಾಶ ಸಿಗುವಲ್ಲಿ ಅರ್ಪಣಾ ಮನೋಭಾವದಿಂದ ಸದಾ ಶ್ರಮಿಸುತ್ತಿರುತ್ತಾರೆ

ಕಾನೂನು ಅರಿವು :

ಜನರಲ್ಲಿ ಕಾನೂನು ಅರಿವು ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಪ್ರಾಧಿಕಾರದಿಂದ ಪ್ರಕಟಿಸಲಾದ ಅನೇಕ ಪುಸ್ತಕಗಳು, ಕಿರು ಹೊತ್ತಿಗೆಗಳು ಹಾಗೂ ಕರಪತ್ರ ಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ಇಲ್ಲವೆ ಅತ್ಯಂತ ಕಡಿಮೆ ಬೆಲೆಗೆ ವಿತರಿಸುವುದು. ಎಲ್ಲಾ ವರ್ಗದ ಜನರಿಗೆ ಕಾನೂನು ಕಾರ್ಯಾಗಾರ, ಸರ್ಕಾರೇತರ ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಇತರೆ ಸ್ವಯಂ ಸಂಸ್ಥೆಗಳ ಸಹಯೋಗದೊಂದಿಗೆ ಕಾನೂನು ಅರಿವು-ನೆರವು ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಜೊತೆಗೆ ಪ್ರಾಧಿಕಾರದಿಂದ ಕಾನೂನು ಗೀತೆಗಳು ಧ್ವನಿ ಸುರಳಿಗಳು, ನಾಟಕಗಳು ಹಾಗೊ ಟೆಲಿ ನಾಟಕಗಳ ಮೂಲಕ ಜನರಲ್ಲಿ ಕಾನೂನಿನ ಬಗೆಗೆ ಅರಿವನ್ನುಂಟು ಮಾಡಲು ನಿರಂತವಾಗಿ ಶ್ರಮಿಸಲಾಗುತ್ತಿದೆ

ಸಂಚಾರಿ ಕಾನೂನು ಸಾಕ್ಷರತಾ ರಥ :

ನಮ್ಮ ನಾಡಿನಲ್ಲಿ ಹಲವು ಜನರಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕೆಂಬ ತವಕವಿದ್ದರೂ ಸಹ ತಮ್ಮ ಜೀವನಾಧಾರವಾದ ಹಣಗಳಿಸುವುದಕ್ಕಾಗಿ ಬಿಡುವಿಲ್ಲದೆ ದುಡಿಯಬೇಕಿದ್ದು, ಕಾನೂನು ಬಗ್ಗೆ ಮಾಹಿತಿ ಪಡೆಯಲು ಅದಕ್ಕಾಗಿ ಇರುವ ಕೇಂದ್ರಗಳಿಗೆ ಭೇಟಿ ನೀಡಲು ಅಶಕ್ತರಾಗಿರುತ್ತಾರೆ. ಇಂತಹ ಜನರನ್ನು ಗಮನದಲ್ಲಿಸಿಕೊಂಡು ರಾಜ್ಯ ಪ್ರಾಧಿಕಾರದ ಕಾನೂನು ಸಾಕ್ಷರತಾ ರಥಗಳ (ಬಸ್) ಮೂಲಕ ಅವರುಗಳಿಗೆ ಕಾನೂನನ ಬಗ್ಗೆ ಮಾಹಿತ ನೀಡಲು ಕ್ರಮಕ್ಕೆಗೊಳ್ಳಲಾಗುವುದು ತಾಲ್ಲೂಕು ಸಮಿತಿಯ ಮೂಲಕ ಹಳ್ಳಿ ಹಳ್ಳಿಗೆ ಸಂಚರಿಸಿ. ಸ್ಥಳೀಯ ನ್ಯಾಯಾಧೀಶರು, ವಕೀಲರು ಹಾಗೂ ಇತರರು ಕಾನೂನು ಪ್ರಸಾರದ ಮೂಲಕ ಕಾಲಕಾಲಕ್ಕೆ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಸಾಮಾನ್ಯರನ್ನು ಕಾನೂನು ಸಾಕ್ಷರರನ್ನಾಗಿ ಮಾಡುವಲ್ಲಿ ಯಶಸ್ಸನ್ನು ಸಾಧಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ:
ತಾಲ್ಲೂಕು ಕಾನೂನು ಸೇವಾ ಸಮಿತಿ ಆನೇಕಲ್
ದೂರವಾಣಿ ಸಂಖ್ಯೆ:
080-22222919

ಮಾನ್ಯ ಅಧ್ಯಕ್ಷರ ಆದೇಶದನುಸಾರ

ಸಹಿ
ಸದಸ್ಯ ಕಾರ್ಯದರ್ಶಿ
ಕಾನೂನು ಸೇವಾ ಸಮಿತಿ,
ಆನೇಕಲ್